**ಕರ್ನಾಟಕ ಸರ್ಕಾರ**

**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ:ಬಿಟಿಇ/06/ಇಸಿಎಸ್(1)/2016

ಕಾರ್ಯದರ್ಶಿಯವರ ಕಛೇರಿ
ತಾಂತ್ರಿಕ ಪರೀಕ್ಷಾ ಮಂಡಳಿ
ಅರಮನೆ ರಸ್ತೆ, ಬೆಂಗಳೂರು-1
ದಿನಾಂಕ: 16-05-2017

**ಸುತ್ತೋಲೆ**

ವಿಷಯ: 2017 ಏಪ್ರಿಲ್/ಮೇ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಗೆ ಸಂಬಂಧಿಸಿದಂತೆ_ಆಂತರಿಕ ಅಂಕಗಳನ್ನು ಆನ್‌ಲೈನ್‌ನಲ್ಲಿ BTELinx ವೆಬ್ ಪೋರ್ಟಲ್ ಮೂಲಕ ಅಪ್‌ಲೋಡ್ ಮಾಡುವ ಕುರಿತು

ಉಲ್ಲೇಖ: ಈ ಕಛೇರಿ ಜ್ಞಾಪನ ಸಂಖ್ಯೆ: ಬಿಟಿಇ/06/ಇಸಿಎಸ್(1)/2016 ದಿನಾಂಕ: 10-04-2017

* * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2017 ಏಪ್ರಿಲ್/ಮೇ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಗೆ ಸಂಬಂಧಿಸಿದಂತೆ ಆಂತರಿಕ ಅಂಕಗಳನ್ನು ಆನ್‌ಲೈನ್‌ನಲ್ಲಿ BTELinx ವೆಬ್ ಪೋರ್ಟಲ್ ಮೂಲಕ ಪರಿವೀಕ್ಷಕರ ಸಮ್ಮುಖದಲ್ಲಿ ಅಪ್‌ಲೋಡ್ ಮಾಡಲು ಉಲ್ಲೇಖಿತ ಜ್ಞಾಪನದನ್ವಯ **ದಿ: 27-04-2017 ರಿಂದ 19-05-2017 ರವರೆಗೆ** ಕಾಲಾವಕಾಶ ನಿಗದಿಪಡಿಸಲಾಗಿತ್ತು.

ಆದರೆ, ಆನ್‌ಲೈನ್‌ನಲ್ಲಿ 2017ರ ಏಪ್ರಿಲ್/ಮೇ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಯ ವಿವಿಧ ಕಾರ್ಯ ಚಟುವಟಿಕೆಗಳು ನಡೆಯುತ್ತಿದ್ದು, ಸರ್ವರ್ ಮೇಲಿನ ಕಾರ್ಯದ ಒತ್ತಡದಿಂದ ಸದರಿ ಅವಧಿಯಲ್ಲಿ ಆಂತರಿಕ ಅಂಕಗಳನ್ನು ಆನ್‌ಲೈನ್ ಅಪ್‌ಲೋಡ್ ಮಾಡಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಬಾಹ್ಯ ಪಾಲಿಟೆಕ್ನಿಕ್ ಸಂಸ್ಥೆಯಿಂದ ತಮ್ಮ ಪಾಲಿಟೆಕ್ನಿಕ್‌ಗೆ ನಿಯೋಜಿಸಲ್ಪಟ್ಟ ಆಂತರಿಕ ಅಂಕಗಳ ಪರಿವೀಕ್ಷಕರನ್ನು ಪರೀಕ್ಷೆಗಳು ಮುಗಿದ ತಕ್ಷಣ ಕಾರ್ಯ ವಿಮುಕ್ತಿಗೊಳಿಸಲು ತಿಳಿಸಲಾಗಿದೆ.

ದಿನಾಂಕ:18-05-2017 ರಿಂದ 24-05-2017 ರವರೆಗೆ BTELinx ವೆಬ್ ಪೋರ್ಟಲ್ ನಲ್ಲಿ ಆಂತರಿಕ ಅಂಕಗಳನ್ನು ಆನ್‌ಲೈನ್ ಅಪ್‌ಲೋಡ್ ಮಾಡಲು ಅವಕಾಶ ನೀಡಲಾಗುವುದು. ಆ ಅವಧಿಯಲ್ಲಿ ಸಂಬಂಧಪಟ್ಟ ಸಂಸ್ಥೆಯ ಪ್ರಿನ್ಸಿಪಾಲರು ಪರಿವೀಕ್ಷಕರ ಸಮ್ಮುಖದಲ್ಲಿ ಆಂತರಿಕ ಅಂಕಗಳನ್ನು ಅಪ್ ಲೋಡ್ ಮಾಡಲು ತಿಳಿಸಲಾಗಿದೆ. ಸದರಿ ದಿನದಂದು ಪರಿವೀಕ್ಷಕರ ಮಾತ್ರ ಸಂಸ್ಥೆಯಲ್ಲಿನ ಗೈರು ಹಾಜರಿಯನ್ನು ಅನ್ಯ ಕಾರ್ಯ ನಿಮಿತ್ತ ಎಂದು ಪರಿಗಣಿಸಲಾಗುವುದು.

ಆಂತರಿಕ ಅಂಕಗಳನ್ನು ನಿಗಧಿತ ಸಮಯದಲ್ಲಿ ಪರಿವೀಕ್ಷಕರ ಸಮ್ಮುಖದಲ್ಲಿ ಆನ್ ಲೈನ್ (BTELinx) ಮೂಲಕ ಅಪ್‌ಲೋಡ್ ಮಾಡದೆ ಫಲಿತಾಂಶ ವಿಳಂಬವಾದರೆ ಹಾಗೂ ಯಾವುದೇ ಲೋಪದೋಷಗಳಿಂದ/ಆಂತರಿಕ ಅಂಕಗಳ ವ್ಯತ್ಯಾಸದಿಂದ ವಿದ್ಯಾರ್ಥಿಗಳಿಗೆ ಫಲಿತಾಂಶದಲ್ಲಿ ತೊಂದರೆಗಳಾದಲ್ಲಿ ಸಂಬಂಧಿಸಿದ ಪ್ರಿನ್ಸಿಪಾಲರನ್ನೇ ನೇರ ಹೊಣೆಗಾರರನ್ನಾಗಿಸಿ ಸರ್ಕಾರಿ ಆದೇಶದ ಪ್ರಕಾರ ಕ್ರಮಕೈಗೊಳ್ಳಲಾಗುವುದು.

ಕಾರ್ಯದರ್ಶಿ

ಇವರಿಗೆ,

1..ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪ್ರಾಂಶುಪಾಲರುಗಳಿಗೆ.-ಅಗತ್ಯ ಕ್ರಮಕ್ಕಾಗಿ
2.ಆಂತರಿಕ ಅಂಕಗಳ ಪರಿವೀಕ್ಷಕರುಗಳಿಗೆ- ಪರೀಕ್ಷಾ ಕೇಂದ್ರಗಳ ಪ್ರಿನ್ಸಿಪಾಲರುಗಳ ಮುಖಾಂತರ

ಪ್ರತಿ:

1. ಕಂಪ್ಯೂಟರ್ ವಿಭಾಗಕ್ಕೆ – ಬಿಟಿಇ ಲಿಂಕ್ಸ್ ವೆಬ್‌ಪೋರ್ಟಲ್‌ನಲ್ಲಿ ಪ್ರಕಟಿಸಲು
2. ಇ-ಗವರ್ನೆನ್ಸ್ ವಿಭಾಗ –ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
3. ಪರೀಕ್ಷಾ ವಿಭಾಗದ ಅಧಿಕಾರಿಗಳು/ ಸಿಬ್ಬಂದಿಯವರಿಗೆ